‘ಹೇಳು ಪುಟ್ಟೀ, ಏನು ಹೇಳ್ಬೇಕೂಂತಿದೀಯೋ ನೇರವಾಗಿ ಹೇಳು. ನಾನೂ ನಿನ್ನ ಅಪ್ಪನ ಹಾಗೇ ಅಲ್ವಾ?’

‘...’

‘ಹೇಳೇ ಸಾಕು’

‘ನೀವು ದುಡ್ಡು ಕೊಡ್ತೀರಿ ನಿಜ. ಆದ್ರೆ ಪರ್ಮನೆಂಟಾಗಿ ಒಂದು ವ್ಯವಸ್ಥೆಯಾದ್ರೆ ನಾವು ನೆಮ್ಮದಿಯಾಗಿರ್ಬೋದು ಅಲ್ವಾ? ಎರಡು ಮನೆಯ ಬಾಡಿಗೆ ಅಂದ್ರೆ ದೊಡ್ಡ ವರಮಾನ’

ಸೊಸೆ ಹೀಗೆ ಯೋಚನೆ ಮಾಡಿದರೆ ತಪ್ಪಲ್ಲ ಅನಿಸಿತು ಚಿದಾನಂದನಿಗೆ. ಒಳ್ಳೆಯ ಹುಡುಗಿ ಶೀಲಾ. ಯಾವ ಕೆಟ್ಟ ಯೋಚನೆಯೂ ಅವಳ ತಲೆಯಲ್ಲಿ ಸುಳಿಯುವುದಿಲ್ಲ ಎನ್ನುವಷ್ಟು ಮುಗ್ಧೆ. ನಿವೃತ್ತನಾಗುವಾಗ ಸಿಕ್ಕಿದ ದೊಡ್ಡ ಮೊತ್ತ ಕೈಯಲ್ಲಿದೆ. ಬಡ್ಡಿಯ ದರ ಚೆನ್ನಾಗಿದ್ದುದರಿಂದ ನಿವೃತ್ತಿವೇತನ ಬೇಡವೆಂದು ಎಲ್ಲವನ್ನೂ ಒಟ್ಟುಗಟ್ಟಲೆಯಾಗಿ ಪಡೆದುಕೊಂಡಿದ್ದಾನೆ ಚಿದಾನಂದ. ಬ್ಯಾಂಕಿನಲ್ಲಿ ಠೇವಣಿ ಇರಿಸಿದ್ದಾನೆ. ಅಲ್ಲಿ ಬ್ಯಾಂಕಲ್ಲಿರುವ ದುಡ್ಡು ಇಲ್ಲಿ ಕಟ್ಟಡದ ಮೇಲೆ ಹಾಕಿದಂತಾಗುತ್ತದೆ. ಬ್ಯಾಂಕಿನಲ್ಲಿಟ್ಟ ದುಡ್ಡಿನ ಬಡ್ಡಿ ಏರಿಳಿತ ಆಗಬಹುದು. ಆದರೆ ದಿನೇ ದಿನೇ ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಮನೆ ಬಾಡಿಗೆ ಏರುಮುಖವಾದೀತೇ ವಿನಃ ಇಳಿಯುವ ಸಾಧ್ಯತೆ ಇಲ್ಲ. ಹೀಗೆಲ್ಲಾ ಲೆಕ್ಕ ಹಾಕಿದರೂ ಒಮ್ಮೆಗೇ ಸೊಸೆಯ ಮನವಿಗೆ ಸಮ್ಮತಿಯ ಮುದ್ರೆ ಒತ್ತಲಿಲ್ಲ ಚಿದಾನಂದ.

‘ತಡಿ, ಅವಸರ ಮಾಡೋದು ಬೇಡ. ನಾನು ಯೋಚನೆ ಮಾಡ್ತೀನಿ’ ಅಂದ.

‘ನಂಗ್ಯಾಕೆ ಈ ಯೋಚನೆ ಬಂತು, ಗೊತ್ತಾ ಮಾವ?’

‘ಯಾಕೆ?’

‘ಮನೆ ಗಿನೆ ಕಟ್ಟೋದು ಅಂದ್ರೆ ನೀವು ಬಿಝಿಯಾಗಿರ್ತೀರಿ. ಬೇಡ ಅಂದ್ರೂ ಚುರುಕಾಗಿ ಇರ್ಲೇಬೇಕಾಗುತ್ತೆ. ಸೋಮಾರಿತನ ಮಾಡೋಕೆ ಸಾಧ್ಯಾನೇ ಇಲ್ಲ’.

‘ಒಳ್ಳೇ ಮಾತಲ್ಲಿ ನನ್ನ ಸೋಮಾರಿ ಅಂತಿದೀಯನೇ?’

‘ಛೇ ಛೇ, ಮುಂದೆ ಹಾಗಾಗ್ಬಾರ್ದು ಅಂತ...’

ನಕ್ಕಿದ್ದಳು ಶೀಲಾ. ಚಿದಾನಂದನಿಗೆ ಅನಿಸಿತ್ತು, ದೇವರು ಒಂದನ್ನು ಕಿತ್ತುಕೊಂಡರೆ ಮತ್ತೊಂದನ್ನು ಕೊಡುತ್ತಾನಂತೆ. ಮಗಳನ್ನು ಕಿತ್ತುಕೊಂಡ. ಅವಳಿಗಿಂತ ಹೆಚ್ಚು ಮನಬಿಚ್ಚಿ ಮಾತಾಡುವ, ಬೇಕು ಬೇಡಗಳನ್ನು ನೋಡಿಕೊಳ್ಳುವ ಸೊಸೆಯನ್ನು ಉಡುಗೊರೆಯಾಗಿ ಕೊಟ್ಟ. ನಮಗೆ ಎಷ್ಟು ಪ್ರಾಪ್ತಿಯೋ ಅಷ್ಟೇ ಲಭ್ಯ. ಇಲ್ಲದಿರುವುದಕ್ಕೆ ಕೊರಗಬಾರದು ಮತ್ತು ಇರುವುದಕ್ಕೆ ಆ ದೇವರಿಗೆ ಕೃತಜ್ಞತೆ ಅರ್ಪಿಸಬೇಕು.

* * *

ಮನೆಯ ಮೇಲೆ ಮೇಲೆ ಮತ್ತೆರಡು ಮನೆ ಎಬ್ಬಿಸುವ ತೀರ್ಮಾನ ಪಕ್ಕಾ ಆಯ್ತು. ಶೀಲಾ ಹೇಳಿದಂತೆ ಅವಳು ನಿರೀಕ್ಷಿಸಿದಂತೆ, ಚಿದಾನಂದ ಮೈ ಕೊಡವಿಕೊಂಡು ಚುರುಕಾಗಲೇಬೇಕಾಯ್ತು. ಮನೆಯ ನಕ್ಷೆ ತಯಾರಿಕೆ, ಮೇಲ್ವಿಚಾರಣೆಗೆ ಅನುಭವಸ್ಥ ಎಂಜಿನಿಯರು, ನಂಬಿಕಸ್ಥ ಮೇಸ್ತ್ರಿಯ ಹುಡುಕಾಟ ಯಾವುದರಲ್ಲಿ ಮೈಮರೆಯುವಂತಿದೆ? ಇವನ್ನೆಲ್ಲಾ ನೋಡಿಕೊಳ್ಳುವಷ್ಟು ಪುರುಸೊತ್ತು ಭಾರ್ಗವನಿಗೆ ಇಲ್ಲ. ಅದಕ್ಕೆ ತಕ್ಕ ಬುದ್ಧಿವಂತಿಕೆಯೂ ಅವನಿಗಿಲ್ಲ ಎಂದು ಚಿದಾನಂದನ ಅನಿಸಿಕೆ. ಶೀಲಾ ಹೇಳಿದ್ದೂ ಅದನ್ನೇ.

‘ಈ ಇವರನ್ನ ನಂಬ್ಬಂಬೇಡಿ ಮಾವ. ನಾನಂತೂ ನಂಬಲ್ಲ’.

‘ಒಳ್ಳೇ ಮಾತಲ್ಲಿ ನನ್ನ ಮಗನಿಗೆ ಬೈತಿದೀಯಾ?’

‘ಸತ್ಯ ಹೇಳ್ತೀದೀನಿ. ವ್ಯವಹಾರ ಜ್ಞಾನ ಇವರಿಗೆ ಇಲ್ವೇ ಇಲ್ಲ’

‘ನಂಗೆ ಇದೆ ಅಂತೀಯಾ?’

‘ನೀವು ಬಿಡಿ ಮಾವ, ದೊಡ್ಡ ಪೋಸ್ಟಲ್ಲಿದ್ದು ರಿಟೈರ್ ಆಗಿರೋರು’.

ಹೊಗಳಿಕೆ ಅನ್ನುವುದು ಯಾರಿಗೆ ಹಿತವಾಗುವುದಿಲ್ಲ? ಬೇಡ.. ಎಂದು ಬಾಯಿ ಮಾತಲ್ಲಿ ಹೇಳುವವರೂ ಅಂತರ್ಯದಲ್ಲಿ ಉಬ್ಬುತ್ತಾರೆ, ಒಂದಿಷ್ಟಾದರೂ.

‘ಬೆಣ್ಣೆ ಹಚ್ಚೋಕೆ ಚೆನ್ನಾಗಿ ಕಲ್ತಿದ್ದಿ’ ಅಂದಿದ್ದ ಚಿದಾನಂದ.

‘ಬೆಣ್ಣೆ ಯಾಕೆ ಖರ್ಚು ಮಾಡ್ಲಿ?’

‘ಅಂದ್ರೆ? ನನ್ನ ಅಟ್ಟಕ್ಕೇರಿಸೋದು ಅಷ್ಟು ಸುಲಭ ಅಂತಾನಾ?’

ಇದ್ದಕ್ಕಿದ್ದಂತೆ ಗಂಭೀರವಾಗಿದ್ದಳು ಶೀಲಾ.

‘ಮಾವ, ತುದಿನಾಲಿಗೆ ಮಾತು ಹೇಳ್ತಿಲ್ಲ. ನಂಗನ್ನಿಸಿದ್ದನ್ನು ಪ್ರಾಮಾಣಿಕವಾಗಿ ಹೇಳ್ತಿದೀನಿ. ನೀವು ದೇವರಂತೋರು. ನೀವು ಬೆನ್ನೆಲುಬಾಗಿ ನಿಂತಿದೀರಿ ಅನ್ನೋದೇ ನಮಗೊಂದು ಧೈರ್ಯ. ಮನೆ ಕಟ್ಟೋಣ ಅಂದೆ. ಬೇಡ ಅಂದ್ರಾ? ಶುರು ಮಾಡೇ ಬಿಟ್ರಿ...’

‘ಸಾಕು ಸಾಕು. ಕಳೆದ ಜನ್ಮದಲ್ಲಿ ಯಾರೋ ರಾಜನ ಆಸ್ಥಾನದಲ್ಲಿ ಹೊಗಳುಭಟ ಆಗಿದ್ದಿ ಅನ್ಸುತ್ತೆ...’

ಹಾಸ್ಯವಾಗಿ ಹೇಳಿದರೂ ಹೃದಯ ತುಂಬಿ ಬಂದಂತಾಗಿದ್ದು ಹೌದು. ಮಾವ, ಸೊಸೆಯರ ನಡುವೆ ಇರುವ ಹೊಂದಾಣಿಕೆ ಭಾರ್ಗವನಿಗೆ ವರದಾನದಂತಿತ್ತು. ಮನೆಯ ಬಗ್ಗೆ ಯಾವ ತಲೆಬಿಸಿಯೂ ಇಲ್ಲದೆ ಅವನು ತನ್ನ ಕೆಲಸಕ್ಕೆ ಹಾಜರಾಗುತ್ತಾ, ತಿಂಗಳ ಸಂಬಳ ಎಣಿಸಿಕೊಂಡು ಬ್ಯಾಂಕಿನಲ್ಲಿ ಭದ್ರವಾಗಿಡುತ್ತಾ ಪಕ್ಕಾ ಸಂಸಾರಸ್ಥನಾಗಿದ್ದ. ಈಗಿರುವುದಕ್ಕಿಂತ ಒಳ್ಳೆಯ ಕೆಲಸ ಹುಡುಕಿಕೊಳ್ಳಲು ಅವನಿಗೆ ಸಾಧ್ಯವಾಗಿರಲಿಲ್ಲ. ಆ ಬಗ್ಗೆ ಪ್ರಯತ್ನಪಟ್ಟಿರಲಿಲ್ಲ ಅಂತಲ್ಲ, ಆದರೆ ಏರುಮುಖವಾಗಿರುವ ಸ್ಪರ್ಧಾ ಜಗತ್ತಿನಲ್ಲಿ ಅವನು ಯಶಸ್ವಿಯಾಗಿರಲಿಲ್ಲ. ಮನೆಯಲ್ಲಿ ಯಾವ ಅಶಾಂತಿಗೂ ಆಸ್ಪದ ಕೊಡದೆ ಅಪ್ಪನನ್ನು ನೋಡಿಕೊಳ್ಳುವ, ಮನೆ ನಿಭಾಯಿಸುವ ಹೆಂಡತಿಯ ನಡವಳಿಕೆ ಅವನಿಗೆ ಹೆಮ್ಮೆ. ಎಲ್ಲರ ಮನೇಲೂ ನಿನ್ನಂತ ಸೊಸೆ ಇದ್ರೆ ಮನೆ ಅನ್ನೋದು ಸ್ವರ್ಗ ಆಗಿರುತ್ತೆ ಕಣೇ...’ ಎಂದು ಬಾಯ್ತುಂಬಾ ಹೊಗಳುವ ಗಂಡ ಶೀಲಾಳಿಗೆ ಅಚ್ಚುಮೆಚ್ಚು.

‘ಹೊರಗೂ ತಲೆ ಬಿಸಿ, ಒಳಗೂ ತಲೆ ಬಿಸಿ ಅಂತಾದ್ರೆ ಗಂಡಸ್ರು ಬದುಕೋಕಾಗುತ್ತೇನ್ರೀ? ಹೆಂಗಸ್ರು ಅರ್ಥ ಮಾಡ್ಕೋಬೇಕು. ಹೊಂದಿ ಕೊಳ್ಳೋಕೆ ಸಾಧ್ಯನೇ ಇಲ್ಲ ಅನಿಸೋ ಸಂಬಂಧಗಳು ಇರೋದೇ ಇಲ್ಲ. ಮುಖ್ಯ ಹೊಂದಿಕೊಂಡಿರ್ಬೇಕು ಅನ್ನೋ ಮನಸ್ಸಿರ್ಬೇಕು...’

ಶೀಲಾ ಜಾಣೆ, ವಾಸ್ತವವಾದಿ ಅನ್ನುವುದರಲ್ಲಿ ಭಾರ್ಗವನಿಗೆ ಅನುಮಾನ ಇರಲಿಲ್ಲ. ಅದಕ್ಕೆ ಸಾಕ್ಷಿ ಎಂಬಂತೆ ಮಾವನ ಮನಸ್ಸನ್ನು ಒಲಿಸಿಕೊಂಡು ಈಗ ಕಾಯಂ ಆಗಿ ಆದಾಯ ಬರುವ ಕಾರ್ಯಕ್ಕೆ ತಳಹದಿ ಹಾಕಿದ್ದಾಳೆ. ತಾನಾಗಿದ್ದರೆ ಇಂತಹ ಯೋಚನೆ ಬರುತ್ತಿತ್ತೋ ಇಲ್ಲವೋ? ಬಂದಿದ್ದರೂ ಅಪ್ಪನ ಎದುರು ಈ ವಿಚಾರ ಹೇಳುವ ಎದೆಗಾರಿಕೆ ಅಥವಾ ಸಲಿಗೆ ತನಗೆ ಬರುತ್ತಿರಲಿಲ್ಲ. ಎಷ್ಟಾದರೂ ಅದು ಅಪ್ಪನ ದುಡಿಮೆಯ ಹಣ. ಶೀಲಾ ಮನೆಗೆ ಬಂದಿದ್ದೇ ಬಂದಿದ್ದು, ಅಪರೂಪಕ್ಕಾದರೂ ಆಗೀಗ ಕಾಡುತ್ತಿದ್ದ ಅಕ್ಕನ ನೆನಪು ಅವನ ಮನಸ್ಸಿನಿಂದ ಸಂಪೂರ್ಣ ಮರೆಯಾಗಿಬಿಟ್ಟಿತ್ತು. ಯಾವುದೋ ಹಳೆಯ ಜನ್ಮದ ಹಲವರಿಕೆಯಂತೆ ಅದರ ನೆರಳು ಉಳಿದುಕೊಂಡಿತ್ತು. ಇತ್ತು ಅಂದರೆ ಇತ್ತು, ಇಲ್ಲ ಅಂದರೆ ಇಲ್ಲ.

***

ಮನೆಯ ಕಟ್ಟೋಣ ಮೇಲುಮೇಲಕ್ಕೆ ಏರಿದಂತೆಲ್ಲಾ ಚಿದಾನಂದನ ದೊಡ್ಡ ಗಂಟು ಕರಗುತ್ತಾ ತಳಮಟ್ಟಕ್ಕೆ ಬಂದಿತ್ತು. ಬೇಕಿತ್ತಾ ಈ ವ್ಯವಹಾರ ಅನ್ನುವಷ್ಟು ಸಾಕುಸಾಕಾಗಿತ್ತು. ವಯಸ್ಸು ಯಾರಪ್ಪನ ಮನೆಯದು? ಸುಳ್ಳೇ ತಾರುಣ್ಯವನ್ನು ಆವಾಹಿಸಿಕೊಳ್ಳಲು ಹೋದರೂ, ಬಾಹ್ಯ ಪ್ರಸಾಧನಗಳಿಂದ ವಯಸ್ಸನ್ನು ಮರೆಮಾಚಲೆತ್ನಿಸಿದರೂ ವಯಸ್ಸು ಆಗುವುದಂತೂ ನಿಜ ತಾನೇ? ಹೊಸ ಕಟ್ಟಡದ ಕೆಲಸವನ್ನು ನೋಡಿಕೊಳ್ಳಬೇಕಾದ್ದು ಕಡ್ಡಾಯವೇನಲ್ಲ. ಆ ಕೆಲಸವನ್ನು ಎಂಜಿನಿಯರ್‌ಗೆ, ಮೇಸ್ತ್ರಿಗೆ ವಹಿಸಿಕೊಟ್ಟಾಗಿದೆ. ಆದರೆ ವಹಿಸಿಕೊಟ್ಟ ಮಾತ್ರಕ್ಕೆ ಎಲ್ಲಾ ಕೆಲಸ ಸರಿಯಾಗಿ ನಡೆಯುತ್ತದೆ ಎನ್ನುವುದಕ್ಕೆ ಖಾತ್ರಿ ಏನಿದೆ? ತಾನೂ ನಿಂತು ನಿಗಾ ನೋಡಿಕೊಳ್ಳುತ್ತಿದ್ದ ಚಿದಾನಂದ. ಬಿಸಿಲಲ್ಲಿ ಬಾಡುತ್ತಿದ್ದ. ಮಳೆಗೆ ನೆನೆಯುತ್ತಿದ್ದ. ಚಳಿಗೆ ನಡುಗುತ್ತಿದ್ದ ಅಂದರೆ ತೀರಾ ಉತ್ಪ್ರೇಕ್ಷೆಯ ಮಾತಾದೀತು.

ಒಟ್ಟಿನಲ್ಲಿ ಅವನ ಜವಾಬ್ದಾರಿ ನಿರ್ವಹಿಸುತ್ತಿದ್ದ. ಕಷ್ಟಪಟ್ಟು ದುಡಿದು ಸಂಪಾದಿಸಿದ ಹಣ ವ್ಯರ್ಥವಾಗಬಾರದೆಂದು ಶ್ರಮಿಸುತ್ತಿದ್ದ. ಗಾರೆ ಕಲೆಸಲು ಎಷ್ಟು ಸಿಮೆಂಟು, ಎಷ್ಟು ಮರಳು ಎನ್ನುವ ಲೆಕ್ಕಾಚಾರದಿಂದ ತೊಡಗಿ ಮೇಲೇರುತ್ತಿದ್ದ ಕಟ್ಟೋಣಕ್ಕೆ ಸರಿಯಾಗಿ ನೀರು ಕೊಡುತ್ತಿದ್ದಾರೆಯೇ ಎನ್ನುವವರೆಗೆ ಹದ್ದಿನ ಕಣ್ಣಿಟ್ಟಿದ್ದ. ಯಾವ ಸಾಮಗ್ರಿಗಳೂ ಕಳುವಾಗದಂತೆ ಎಚ್ಚರಿಕೆ ವಹಿಸಿದ್ದ.

ಒಟ್ಟಿನಲ್ಲಿ ಕಟ್ಟಡ ಗಟ್ಟಿಮುಟ್ಟಾಗಿರಬೇಕು ಎನ್ನುವುದು ಅವನ ಪರಮೋದ್ದೇಶವಾಗಿತ್ತು. ಏರುತ್ತಿರುವ ವಯಸ್ಸು, ಕಾಡುತ್ತಿರುವ ಕಾಯಿಲೆ, ಜೊತೆಗೆ ದೈಹಿಕ ದಣಿವು. ಮಾವನನ್ನು ನೋಡಿ ಕಣ್ತುಂಬಿಕೊಳ್ಳುತ್ತಿದ್ದಳು ಶೀಲಾ.

(ಸಶೇಷ)